**OS . ನಂ.18 /2016 ಪಿ.ಡಬ್ಲೂ-1**

**ಸಾಕ್ಷಿಯನ್ನು ದಿಃ05.07 .2019 ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ P.N.S ವಕೀಲರಿಂದಃ**

ಪಾಂಡುರಂಗರಾವ ಇವರು BSc ಅಪೂರ್ಣಗೊಳಿಸಿದ್ದರು. ಪಾಂಡುರಂಗರಾವ ಇವರನ್ನು ಅಕ್ಕಪಕ್ಕದ ಹಳ್ಳಿಯಲ್ಲಿ ದೇಸಾಯಿ ಎಂದು ಕರೆಯುತ್ತಿದ್ದರು. ಪಾಂಡುರಂಗರಾವ ಅವರು ಪ್ರಮಾಣಿಕ ವ್ಯಕ್ತಿ ಎಂದರೆ ಸರಿ. ಪಾಂಡುರಂಗರವರು ಸಮಾಜದಲ್ಲಿ ಗಣ ವ್ಯಕ್ತಿ ಮತ್ತು ಪ್ರತಿಷ್ಠ ಹೊಂದಿದ ವ್ಯಕ್ತಿ ಎಂದು ಗುರುತಿಸಲ್ಪಟ್ಟಿದ್ದರು ಎಂದರೆ ಸರಿ. ಪಾಂಡುರಂಗರವರು ಇವರಿಗೆ ಯಾವುದೆ ದುಶಚಟ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ನನ್ನ ಸಹೋದರರು. ಅವರು ಇಸ್ಪಾಟ ಆಡುವುದು ಮತ್ತು ಜೂಜಾಟ , ಮಧಾಪಾನ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ. ಪಾಂಡುರಂಗರವರು ಮತ್ತು ಅವರ ಎಲ್ಲ ಸಹೋದರಿಯವರ ಸಂಭಂದ ಚೆನ್ನಾಗಿತ್ತು ಎಂದರೆ ಸರಿಯಲ್ಲ. ನನಗೆ ಮತ್ತು ಪಾಂಡುರಂಗ ರಾವ ಇವರ ಮಧ್ಯೆ ಯಾವುದೆ ಜಗಳ ಇರಲಿಲ್ಲ. ಪಾಂಡುರಂಗರಾವ ಜೀವಂತ ಇರುವವರೆಗ ನಾನು ತವರು ಮನಗೆ ಹೋಗಿ ಬರುತ್ತಿದ್ದೆನು. ಹಣಮಂತರಾವರಿಗೆ 7 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗನಿದ್ದನು.

ಹಣಮಂತರಾವ ಜೀವಂತ ಇರುವರೆಗೂ ಸಂಪೂರ್ಣ ಮನೆತನ ವ್ಯವಾಹರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನಮ್ಮ ತಂದಗೆ ವಯಸ್ಸಾಗಿದ್ದ ಕಾರಣ ಹೊಲಕೆ ಹೋಗಿ ನೋಡುವ ಕೆಲಸ ಮಾತ್ರ ಪಾಂಡುರಂಗರಾವ ಮಾಡತ್ತಿದ್ದು ಜವಾಬ್ದಾರಿಯ ಎಲ್ಲಾ ಕೆಲಸಗಳು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು . ನಮ್ಮ ತಂದೆ ತೀರಿಕೊಂಡ ನಂತರ ಮನೆತನದ ಎಲ್ಲಾ ಜವಾಬ್ದಾರಿಯನ್ನು ಪಾಂಡುರಂಗರವರು ಮಾಡುತ್ತಿದ್ದರು ಎಂದರೆ ಮಗ ಇದ್ದಿದ್ದರಿಂದ ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ಪಾಂಡುರಂಗರಾವ ಇವರ ಮನೆತನದ ವ್ಯವಾಹರವನ್ನು ನಾವು 7 ಜನ ಸಹೋದರಿಯವರು ನೋಡಿಕೊಳ್ಳಲು ಆಗುತ್ತಿರಲಿಲ್ಲ. 1970 ರಿಂದ ಈ ಭಾಗದ ಬರಗಾಲ ಇದೆ ಎಂದರೆ ಸರಿಯಲ್ಲ. 1970 ರಿಂದ ಬರಗಾಲ ಇದ್ದ ಕಾರಣ ಜಮೀನು ಇದ್ದರು ಕೂಡ ಆದಾಯ ಬರುತಿರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದಗೆ ಒಟ್ಟು 80 ಎಕರೆ ಜಮೀನು ಇತ್ತು ಎಂದರೆ ಗೊತ್ತಿಲ್ಲ. ಈ ದಾವೆ ಹಾಕುವ ಸಮಯದಲ್ಲಿ ನಮ್ಮ ತಂದೆಗೆ ಒಟ್ಟು ಎಷ್ಟು ಎಕರೆ ಜಮೀನು ಇತ್ತುಎಂದು ನಾನು ಚೌಕಾಸಿ ಮಾಡಿಲ್ಲ. ಸರ್ವೆ ನಂಃ 131 , ಮತ್ತು , 08 ನಮ್ಮ ತಂದಗೆ ಸೇರಿದ್ದು ಸರ್ವೆ ನಂಬರ 129 ರ ಬಗ್ಗೆ ನನಗೆ ಗೋತ್ತಿಲ್ಲ. ನನ್ನ ದಾವೆಗೆ ಮಹಿಬೂಬ ಮತ್ತು ಮಹಾದೇವ ರವರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪ್ರತಿವಾದಿಗಳಾದ ಮಹಿಬೂನ ಮತ್ತು ಮಹಾದೇವ ಮತ್ತು ಶ್ರೀದೇವಿರವರು ಸಲ್ಲಿಸಿದ ಪ್ರತಿವಾದ ಪತ್ರದ ಖಂಡಿಕೆ 6 ರಲ್ಲಿ ಬರೆದಿರುವ ವಿಚಾರ ನನಗೆ ಗೋತ್ತಿಲ್ಲ. ಸರ್ವೆ ನಂಃ 129 ಮತ್ತು 08 ಇವುಗಳನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಜಮೀನುಗಳ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಕುಟುಂಬದ ಅಡಚಣೆಗಾಗಿ 40 ಎಕರೆ ಜಮೀನು  ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಲತೀಕಾರವರು ನನ್ನ ಅತ್ತಿಗೆ ನಾನು ಅವರಮೇಲೆ ಈ ದಾವೆ ಮಾಡಿರುತ್ತೇನೆ. ಲತೀಕಾರವರ ಮತ್ತು ನನ್ನ ಮಧ್ಯೆ ಸಂಭಂದ ಸರಿಯಿಲ್ಲ. ಮಹಾದೇವ ಮತ್ತು ಶ್ರಿದೇವಿರವರ ಅಡಮಾನ ಮಾಡಿದ್ದರಿಂದ ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೆ.  ಆ ಎರಡು ಅಡಮಾನ ಪತ್ರಗಳನ್ನು ಹಣಮಂತರಾವರವರು ಮಾಡಿದ್ದಾರೊ ಅಥವಾ ಪಾಂಡುರಂಗರವರು ಮಾಡಿದ್ದರೊ  ಎಂದರೆ ಪಾಂಡುರಂಗರಾವ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಶ್ರಿದೇವಿರವರಿಗೆ ಪಾಂಡುರಂಗರಾವ ಅವರು ಸರ್ವೇ  ನಂಃ 8 ರಲ್ಲಿ ಸುಮಾರು  2 ಎಕರೆ ಅಡಮಾನ ಮಾಡಿಕೊಟ್ಟಿದ್ದರು.   ಮಾಹದೇವರವರಿಗೆ ಸರ್ವೇ  ನಂಃ 130 ರಲ್ಲಿ ಅಂದಾಜು 4 ಎಕರೆ ಜಮೀನನ್ನು ಪಾಂಡುರಂಗರವರು ಅಡಮಾನ ಮಾಡಿಕೊಟ್ಟಿದ್ದರು.  ಶ್ರಿದೇವಿರವರರಿಗೆ ಪಾಂಡುರಂಗರಾವ ಇವರು 2 ಲಕ್ಷ ರೂಪಾಯಿಗೆ ಅಡಮಾನ ಮಾಡಿ ಕೊಟ್ಟಿದ್ದರು ಅದಕ್ಕೆ ಅಂದಾಜು ಬಡ್ಡಿ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಮಹಾದೇವರವರಿಗೆ ಪಾಂಡುರಂಗರಾವ ಇವರು 6 ಲಕ್ಷ 80 ಸಾವಿರ ರೂಪಾಯಿಗೆ ಅಡಮಾನ ಮಾಡಿಕೊಟ್ಟಿದ್ದರು .  ಆ ಇಬ್ಬರಿಗೆ ಮಾಡಿಕೊಟ್ಟಿರುವ ಅಡಮಾನ ಪತ್ರಕ್ಕೆ ಬಡ್ಡಿ ಇತ್ತು ಇಲ್ಲ ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ನ್ಯಾಯಲಯದ ಸಮಯವಾಗಿದ್ದರಿಂದ  ಪಾಟೀ ಸವಾಲಿಗೆ ಮುಂದೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿನನ್ನ  ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ